ಪಡೆದಿರುವ 'ಡಿ ದರ್ಜೆ' ನೌಕರರಿಗೆ ಮುಂಬಡ್ತಿ ನೀಡುವ ಮೂಲಕ ಆದ್ಯತೆ ಮೇರೆಗೆ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

8. **'ಡಿ ದರ್ಜೆ' ನೌಕರರು :** ಖಾಲಿ ಇರುವ 'ಡಿ ದರ್ಜೆ' ಹುದ್ದೆಗಳನ್ನು ಆದ್ಯತೆ ಮೇರೆಗೆ ಜಿಲ್ಲಾ ಉಪ ನಿರ್ದೇಶಕರ ಮುಖಾಂತರ ಹೊರ ಗುತ್ತಿಗೆ ಆಧಾರದ ಮೇರೆಗೆ ತುಂಬಲು ಕ್ರಮ ವಹಿಸಲಾಗುವುದು.

II. ಔಷಧಿಗಳು : ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದಾಗ್ಯೂ ರಾಜ್ಯ ವಲಯ, ಜಿಲ್ಲಾ ವಲಯ ಮತ್ತು ಪ್ರಕೃತಿ ವಿಕೋಪ ಪರಿಹಾರ ನಿಧಿಯಾಗಿ ಲಭ್ಯವಿರುವ ಅನುದಾನದಲ್ಲಿ ಔಷಧಿಗಳನ್ನು ಖರೀದಿಸಿ ಎಲ್ಲಾ ಸಂಸ್ಥೆಗಳಿಗೆ ಸರಬರಾಜು ಮಾಡಲಾಗಿದೆ.

337 (690) ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು ಹಾಗೂ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸ್ವಂತ ಕಟ್ಟಡ ಹೊಂದಿರುವ ಪದವಿ ಕಾಲೇಜುಗಳು ಎಷ್ಟು ಮತ್ತು ಯಾವುವು;

ಇ) ಸ್ವಂತ ಕಟ್ಟಡಗಳು ಇಲ್ಲದ ಪದವಿ ಕಾಲೇಜುಗಳು ಎಷ್ಟು ಮತ್ತು ಯಾವುವು;

ಈ) ಸ್ವಂತ ಕಟ್ಟಡ ಹೊಂದಿರುವ ಕಾಲೇಜುಗಳಿಗೆ ಸರ್ಕಾರದಿಂದ ನೀಡಿರುವ ಅನುದಾನವೆಷ್ಟು; ಸ್ವಂತ ಕಟ್ಟಡ ಇಲ್ಲದ ಸರ್ಕಾರಿ ಪದವಿ ಕಾಲೇಜುಗಳಿಗೆ ಮೀಸಲಿಟ್ಟ ಹಣ ಎಷ್ಟು (ಪೂರ್ಣ ಮಾಹಿತಿ ನೀಡುವುದು);

ಉ) ಗುಡಿಬಂಡೆ ಮತ್ತು ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಸರ್ಕಾರಿ ಪದವಿ ಕಾಲೇಜುಗಳಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಮತ್ತು ಕಾಲೇಜುಗಳಲ್ಲಿ ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ವರ್ಗದವರ ಕೊರತೆಯಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಕುಂಠಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಪೂರ್ಣ ವಿವರಣೆ ನೀಡುವುದು);

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ)

1) ಇಂಜಿನಿಯರಿಂಗ್ ಕಾಲೇಜು – ಇಲ್ಲ
2) ಮೆಡಿಕಲ್ ಕಾಲೇಜು – ಇಲ್ಲ
3) ಪದವಿ ಕಾಲೇಜು – 08

1) ಚಿಕ್ಕಬಳ್ಳಾಪುರ 2) ಚಿಂತಾಮಣಿ (ಬಾಲಕಿಯರ ಸಪ್ರದಕಾ) 3) ಚಿಂತಾಮಣಿ (ಬಾಲಕರ.ಸಪ್ರದಕಾ) 4) ಶಿಡ್ಲಘಟ್ಟ 5) ಗುಡಿಬಂಡೆ 6) ಗೌರಿಬಿದನೂರು 7) ಬಾಗೇಪಲ್ಲಿ 8) ವೇಮಗಲ್ಲು

ಆ) 04

1) ಚಿಕ್ಕಬಳ್ಳಾಪುರ 2) ಚಿಂತಾಮಣಿ (ಬಾಲಕಿಯರ ಸಪ್ರದಕಾ) 3) ಚಿಂತಾಮಣಿ (ಬಾಲಕರ.ಸಪ್ರದಕಾ) 4) ಶಿಡ್ಲಘಟ್ಟ

ಇ)

1) ಗುಡಿಬಂಡೆ 2) ಗೌರಿಬಿದನೂರು 3) ಬಾಗೇಪಲ್ಲಿ
4) ವೇಮಗಲ್ಲು

ಈ) ಅನುಬಂಧ ಲಗತ್ತಿಸಿದೆ.

ಉ) ಬಂದಿದೆ.

ಹಣಕಾಸಿನ ಲಭ್ಯತೆಯನ್ನಾಧರಿಸಿ ಮುಂದಿನ ಸಾಲುಗಳಲ್ಲಿ ಕಟ್ಟಡ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಬಂದಿದೆ. ಪ್ರಸ್ತುತ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡಿರುವು ದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿಲ್ಲ. ಕೆಪಿಎಸ್‌ಸಿ ಯಿಂದ ಬಾಕಿ ಇರುವ 04 ಪ್ರಾಧ್ಯಾಪಕರನ್ನು ನೇಮಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಧಾನಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 690ರ ಪ್ರಶ್ನೆ ಈ ಗೆ ಅನುಬಂಧ

ಸ್ವಂತ ಕಟ್ಟಡ ಹೊಂದಿರುವ ಕಾಲೇಜುಗಳು

1. ಚಿಕ್ಕಬಳ್ಳಾಪುರ
2. ಚಿಂತಾಮಣಿ (ಬಾಲಕರ ಸ.ಪ್ರದಕಾ)

3. ಚಿಂತಾಮಣಿ (ಬಾಲಕಿಯರ ಸಪ್ರದಕಾ)
4. ಶಿಡ್ಲಘಟ್ಟ

ಅನುದಾನದ ವಿವರಗಳು

1. ಚಿಕ್ಕಬಳ್ಳಾಪುರ – 2004–05ರಲ್ಲಿ 15 ಲಕ್ಷಗಳು
2005–06ರಲ್ಲಿ 15 ಲಕ್ಷಗಳು
2006–07ರಲ್ಲಿ 15 ಲಕ್ಷಗಳು
2006–07 ರಲ್ಲಿ 09 ಲಕ್ಷಗಳು (ಕಾಲೇಜಿನ ಹೆಚ್ಚುವರಿ ಕೊಠಡಿಗಳ ಕಾಮಗಾರಿಗೆ)
2007–08ರಲ್ಲಿ 3.20 ಲಕ್ಷಗಳು
2008–09ರಲ್ಲಿ 11.76 ಲಕ್ಷಗಳು

2. ಚಿಂತಾಮಣಿ (ಬಾಲಕರ ಸಪ್ರದಕಾ) 2007–08ರಲ್ಲಿ 33,00 ಲಕ್ಷಗಳು
2008–09ರಲ್ಲಿ 33,00 ಲಕ್ಷಗಳು
2009–10ರಲ್ಲಿ 45,00 ಲಕ್ಷಗಳು

3. ಚಿಂತಾಮಣಿ (ಬಾಲಕಿಯರ ಸಪ್ರದಕಾ) 2005–06ರಲ್ಲಿ 15 ಲಕ್ಷಗಳು
2008–09ರಲ್ಲಿ 40,00 ಲಕ್ಷಗಳು

4. ಶಿಡ್ಲಘಟ್ಟ 2007–08ರಲ್ಲಿ (4202 ರಡಿಯಲ್ಲಿ) 50;00 ಲಕ್ಷಗಳು
30.00 (ಅಪೆಂಡಿಕ್ಸ್–ಇ ರಡಿಯಲ್ಲಿ)

ಷರಾ: ಪ್ರಸ್ತುತ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ.

ಸ್ವಂತ ಕಟ್ಟಡ ಇಲ್ಲದ ಕಾಲೇಜುಗಳು :

1. ಗೌರಿಬಿದನೂರು – **75.00 ಲಕ್ಷಗಳು**
2. ವೇಮಗಲ್ಲು – **ಇಲ್ಲ**
3. ಗುಡಿಬಂಡೆ – **24 + 30 ಲಕ್ಷಗಳು**
4. ಬಾಗೇಪಲ್ಲಿ – **ಇಲ್ಲ**

ಷರಾ: ಗುಡಿಬಂಡೆ ಸರ್ಕಾರಿ ಪ್ರ.ದ.ಕಾಲೇಜಿನ ಕಟ್ಟಡ ಕಾಮಗಾರಿಯು ಲಿಂಟಲ್ ಮಟ್ಟಕ್ಕೆ ಬಂದಿದ್ದು, ಪ್ರಗತಿಯಲ್ಲಿದೆ.